ಮೀನುಗಾರಿಕೆ ಇಲಾಖೆಯು ಮೀನುಗಾರಿಕೆ ಸಚಿವರ ಅಧಿಕಾರ ವ್ಯಾಪ್ತಿಯಲ್ಲಿರುತ್ತದೆ. ಸರ್ಕಾರದ ಹಂತದಲ್ಲಿ ಪ್ರಧಾನ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆರವರು ಮುಖ್ಯಸ್ಥರಾಗಿರುತ್ತಾರೆ. ಮೀನುಗಾರಿಕೆ ಇಲಾಖೆಯ ಆಡಳಿತ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳು ಮೀನುಗಾರಿಕೆ ನಿರ್ದೇಶಕರ ನೇತೃತ್ವದಲ್ಲಿ ನಡೆಯುತ್ತಿವೆ. ನಿರ್ದೇಶಕರ ಸಹಾಯಕ್ಕಾಗಿ 06 ಜಂಟಿ ನಿರ್ದೇಶಕರು, 09 ಉಪ ನಿರ್ದೇಶಕರು (ವಲಯಮಟ್ಟದ ಅಧಿಕಾರಿಗಳು), ಹಾಗೂ 26 ಹಿರಿಯ ಸಹಾಯಕ ನಿರ್ದೇಶಕರುಗಳು (ಜಿಲ್ಲಾಮಟ್ಟದ ಅಧಿಕಾರಿಗಳು) ಕಾರ್ಯನಿರ್ವಹಿಸುತ್ತಿದ್ದಾರೆ. 32 ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-1) (ಜಿಲ್ಲಾಮಟ್ಟದ ಅಧಿಕಾರಿಗಳು) ಹಾಗೂ 186 ತಾಲ್ಲೂಕು ಮಟ್ಟದ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಇಲಾಖೆಯಲ್ಲಿ ಒಟ್ಟು 1401 ವಿವಿಧ ವೃಂದದ ಹುದ್ದೆಗಳು ಮಂಜೂರಾಗಿದ್ದು, 679 ಅಧಿಕಾರಿ ಮತ್ತು ಸಿಬ್ಬಂದಿ ಹುದ್ದೆಗಳು ಭರ್ತಿಯಾಗಿದ್ದು 722 ಹುದ್ದೆಗಳು ಖಾಲಿ ಇವೆ.

**2. 2019-20 ರ ವಾರ್ಷಿಕ ಯೋಜನೆ:**

2019-20 ನೇ ಸಾಲಿನಲ್ಲಿ ಒಟ್ಟು ರೂ.28001.58 ಲಕ್ಷಗಳ ಅನುದಾನವನ್ನು ನೀಡಲಾಗಿತ್ತು. ಕೆಲವು ಯೋಜನೆಗಳಿಗೆ ಅಗತ್ಯತೆಗೆ ಅನುಗುಣವಾಗಿ ಹೆಚ್ಚುವರಿ ಅನುದಾನ ರೂ.4593.53 ಲಕ್ಷಗಳನ್ನು ನೀಡಲಾಗಿದೆ. ಹೀಗೆ ಮೀನುಗಾರಿಕೆ ಇಲಾಖೆಗೆ 2019-20 ನೇ ಸಾಲಿನಲ್ಲಿ ಒಟ್ಟು ರೂ.32600.11 ಲಕ್ಷಗಳ ಅನುದಾನ ಒದಗಿಸಲಾಗಿರುತ್ತದೆ. ವಿವರಗಳನ್ನು ಕೆಳಗಿನಂತೆ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

| **ವಿವರ** | **ರಾಜ್ಯದ ಪಾಲು** | **ಕೇಂದ್ರದ ಪಾಲು** | **ಒಟ್ಟು** |
|---|---|---|---|
| **ರಾಜ್ಯ ವಲಯ ಯೋಜನೆಗಳು** | | | |
| ಅ) 2405-ಮೀನುಗಾರಿಕೆ | 19804.765 | 898.525 | 20703.29 |
| ಆ) 4405-ಮೀನುಗಾರಿಕೆ ಮೇಲಣ ಬಂಡವಾಳ ವೆಚ್ಚ | 4160.87 | 3700.00 | 7860.87 |
| **ಒಟ್ಟು ರಾಜ್ಯ ವಲಯ** | **23965.635** | **4598.525** | **28564.16** |
| **ಜಿಲ್ಲಾ ಪಂಚಾಯತ್ ಯೋಜನೆಗಳು** | | | |
| ಅ) 2405-ಮೀನುಗಾರಿಕೆ | 3784.06 | - | 3784.06 |
| **ಒಟ್ಟು** | **27749.695** | **4598.525** | **32348.22** |

ಹೆಚ್ಚುವರಿ ಅನುದಾನ ಪಡೆದ ಯೋಜನೆಗಳ ವಿವರಗಳು ಕೆಳಗಿನಂತೆ ನೀಡಲಾಗಿದೆ.

| **ಕ್ರ.ಸಂ** | **ಯೋಜನೆ** | **ಹೆಚ್ಚುವರಿ ಅನುದಾನ (ರೂ.ಲಕ್ಷ)** |
|---|---|---|
| 1. | ಕೇಂದ್ರ ಪುರಸ್ಕೃತ ಯೋಜನೆ ನೀಲಿ ಕ್ರಾಂತಿ – ಮೀನುಗಾರಿಕೆಯ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ-2405-00-101-0-58 | 669.21 |
| 2. | ಮೀನುಗಾರಿಕೆ ಬಂದರುಗಳ ನಿರ್ಮಾಣ - ಕೇಂದ್ರ ಪುರಸ್ಕೃತ ಯೋಜನೆ-4405-00-103-6-01 | 232.26 |
| | **ಒಟ್ಟು** | **901.47** |

2019-20 ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಮೀನುಗಾರಿಕೆ ಇಲಾಖೆಗೆ ಒಟ್ಟು ರೂ.4598.53 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ. ಇದಲ್ಲದೆ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ರೂ.2272.70 ಲಕ್ಷಗಳ ಅನುದಾನ ನೀಡಲಾಗಿದೆ.

(ರೂ. ಲಕ್ಷಗಳಲ್ಲಿ)

| ಯೋಜನೆ | ಅನುದಾನ | ವೆಚ್ಚ |
|---|---|---|
| 1) ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ | 434.50 | 388.84 |
| 2) ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ | 676.05 | 605.69 |
| 3)ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ | 180.00 | 176.27 |
| 4) ಪ್ರದರ್ಶನಗಳು ಮತ್ತು ತರಬೇತಿ | 109.51 | 105.30 |
| 5) ಜಿಲ್ಲಾ ಮತ್ತು ಇತರೆ ಸಿಬ್ಬಂದಿ | 2384.00 | 2430.60 |
| **ಒಟ್ಟು** | **3784.06** | **3706.60** |

## 10. ವೆಚ್ಚ ಮತ್ತು ಆದಾಯ:

2018–19 ಮತ್ತು 2019–20ನೇ ಸಾಲುಗಳಲ್ಲಿ ಇಲಾಖೆಯ ವಿವಿಧ ಯೋಜನೆಗಳಡಿ ಆಗಿರುವ ವೆಚ್ಚ ಮತ್ತು ಆದಾಯದ ವಿವರಗಳು ಕೆಳಕಂಡಂತಿವೆ.

(ರೂ.ಲಕ್ಷಗಳಲ್ಲಿ)

| ಕ್ರ.ಸಂ. | ಯೋಜನೆಗಳು | 2018-19 | 2019-20 |
|---|---|---|---|
| 1 | ರಾಜ್ಯ ವಲಯದ ಯೋಜನೆಗಳ ವೆಚ್ಚ | 33314.36 | 27862.10 |
| 2 | ಜಿಲ್ಲಾ ಪಂಚಾಯತ್ ಯೋಜನೆಗಳ ವೆಚ್ಚ | 3474.98 | 3706.60 |
| 3 | ಆದಾಯ | 1897.93 | 31568.70 |

**ಮೀನುಗಾರಿಕೆ ನಿರ್ದೇಶಕರು**